ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

ಸಂ: DH-HIC0HICT/9/2025 **(E-**1675891)

**ತೋಟಗಾರಿಕೆ ನಿರ್ದೇಶನಾಲಯ,**
**ಲಾಲ್‌ಬಾಗ್, ಬೆಂಗಳೂರು-04,**
**ದಿನಾಂಕ: 21-02-2025**

**ಸುತ್ತೋಲೆ**

ವಿಷಯ: - 2025-26 ನೇ ಸಾಲಿಗೆ ತೋಟಗಾರಿಕೆ ಇಲಾಖಾ ತರಬೇತಿ ಕೇಂದ್ರಗಳಿಗೆ ತರಬೇತಿ ಅಭ್ಯರ್ಥಿಗಳ ಗುರಿ ನಿಗಧಿಪಡಿಸುವ ಕುರಿತು.

**********

ತೋಟಗಾರಿಕೆ ಇಲಾಖೆಯ ಅಧೀನದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 11 ತೋಟಗಾರಿಕೆ ತರಬೇತಿ ಕೇಂದ್ರಗಳಲ್ಲಿ 2025-26ನೇ ಸಾಲಿನಲ್ಲಿ ದಿನಾಂಕ**: 02-05-2025 ರಿಂದ 28-02-2026** ರವರೆಗೆ ರೈತರ ಮಕ್ಕಳಿಗೆ 10 ತಿಂಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕೆಳಕಂಡ ವೇಳಾಪಟ್ಟಿಯನ್ನು ನಿಗದಿಪಡಿಸಿದೆ ಹಾಗೂ 11 ತೋಟಗಾರಿಕೆ ತರಬೇತಿ ಕೇಂದ್ರಗಳಿಗೆ ನಿಗದಿ ಪಡಿಸಿರುವ ಅಭ್ಯರ್ಥಿಗಳ ಗುರಿಗಳನ್ನು ಅನುಬಂಧ (1) ರಲ್ಲಿ ನೀಡಲಾಗಿದೆ.

ಎ) ದಿನ ಪತ್ರಿಕೆಗಳಲ್ಲಿ ಪ್ರಚಾರ ನೀಡುವ ದಿನಾಂಕ : **01-03-2025 ರೊಳಗೆ**

ಬಿ) ಅರ್ಜಿಗಳನ್ನು ಪಡೆಯುವಿಕೆ : ಅರ್ಜಿಗಳನ್ನು ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರ ಕಛೇರಿಯಲ್ಲಿ ಅಥವಾ ಇಲಾಖೆ ವೆಬ್‌ಸೈಟ್ **https://horticulturedir.karnataka.gov.in** ನಲ್ಲಿ **ದಿನಾಂಕ: 01-03-2025 ರಿಂದ 31-03-2025** ರವರೆಗೆ Download ಮಾಡಿಕೊಳ್ಳಬಹುದು.

ಸಿ) ಅರ್ಜಿ ಶುಲ್ಕ : ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರ ಕಛೇರಿಯಲ್ಲಿ ಸಲ್ಲಿಸುವಾಗ ಅರ್ಜಿ ಶುಲ್ಕದ ಬಾಬ್ತು ಸಾಮಾನ್ಯ ಅಭ್ಯರ್ಥಿಗಳಿಗೆ ರೂ.30/-, ಪರಿಶಿಷ್ಟ ಜಾತಿ/ ಪಂಗಡದ ಅಭ್ಯರ್ಥಿಗಳಿಗೆ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ರೂ.15/, ಗಳ ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD)/K-2 payment challan ಮುಖೇನ ಆಯಾ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಹೆಸರಿನಲ್ಲಿ ಪಡೆದು, ಅರ್ಜಿ ಜೊತೆಗೆ ಲಗತ್ತಿಸಬೇಕು.

ಡಿ) ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **01-04-2025 ರ ಸಂಜೆ 5.30 ಗಂಟೆಯವರೆಗೆ,**

ಇ) ಸಂದರ್ಶನ ಮಾಡುವ ದಿನಾಂಕ : **08-04-2025**

ಈ) ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು ಹಾಗೂ ಪ್ರವೇಶ ಪತ್ರ ನೀಡುವ ದಿನಾಂಕ : **16-04-2025**

ಉ) ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸುವ ದಿನಾಂಕ : **21-04-2025**

ಊ) ಅಭ್ಯರ್ಥಿಗಳು ತರಬೇತಿಗೆ ಹಾಜರಾಗುವ ದಿನಾಂಕ : **02-05-2025**

1. **ತರಬೇತಿಗೆ ಅರ್ಹತೆ: -**

ಅಭ್ಯರ್ಥಿಗಳು ಕನಿಷ್ಟ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು. ತರಬೇತಿ ಪ್ರವೇಶ ಬಯಸುವ ಅಭ್ಯರ್ಥಿಯ ತಂದೆ/ ತಾಯಿ/ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ.

ಮಾಜಿ ಸೈನಿಕರು ಪ್ರವೇಶ ಪಡೆಯಲು ಇಚ್ಛಿಸಿದಲ್ಲಿ ಮೇಲೆ ತಿಳಿಸಿದ ವಿವರಗಳೊಂದಿಗೆ ಇತರೆ ದಾಖಲಾತಿಗಳಾದ Discharge book copy, Personal Pension Order copy, Ex. Serviceman ID card copy, ಇತ್ಯಾದಿಗಳನ್ನು ಸಲ್ಲಿಸಬೇಕು.

2. **ತರಬೇತಿ ಅವಧಿ: -**

ದಿನಾಂಕ:02-05-2025 ರಿಂದ 28-02-2026 ರವರೆಗೆ (10 ತಿಂಗಳ ತರಬೇತಿ) ತರಬೇತಿ ನೀಡಲಾಗುವುದು. ಆಯಾ ತರಬೇತಿ ಕೇಂದ್ರಕ್ಕೆ **ಅನುಬಂಧ-1 ರಲ್ಲಿ ನೀಡಿರುವ ಗುರಿಗಳಂತೆ ಅಭ್ಯರ್ಥಿಗಳನ್ನು 2025-26 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ತೋಟಗಾರಿಕೆ ವಿಸ್ತರಣೆ ಕಾರ್ಯಕ್ರಮ**ದಡಿ ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳುವುದು. ದಿನಾಂಕ 21-04-2025 ರೊಳಗಾಗಿ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸುವುದು. **ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ. 1,750/- ಗಳ ಮಾಸಿಕ ಶಿಷ್ಯವೇತನ ನೀಡಲಾಗುವುದು.**

3. **ವಯೋಮಿತಿ: -**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 33 ವರ್ಷ, ಮಾಜಿ ಸೈನಿಕರಿಗೆ 33 ರಿಂದ ಗರಿಷ್ಟ 65 ವರ್ಷ ಹಾಗೂ ಇತರರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 30 ವರ್ಷ.

4. **ಆಯ್ಕೆ ಸಮಿತಿ: -**

ಪ್ರತಿ ಜಿಲ್ಲೆಯಲ್ಲಿ ಆಯಾ ಜಿಲ್ಲೆಯ **ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)ರವರು ಆಯ್ಕೆ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಆಯಾ ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾಜ್ಯ ವಲಯ) ರವರು ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.** ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಅಧಿಕಾರಿಗಳು, ವಿಕಲಚೇತನರು ಹಾಗೂ

ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಅಧಿಕಾರಿಗಳು, ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರದ ಪ್ರತಿನಿಧಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ತರಬೇತಿ ಕೇಂದ್ರದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಸದರಿ ಸಮಿತಿರವರು ಕರ್ನಾಟಕ ಸರ್ಕಾರದ ಮಿಸಲಾತಿಯಂತೆ ಕ್ರಮ ವಹಿಸುವುದು.

5. **ಮೀಸಲಾತಿ:-**

2025-26 ನೇ ಸಾಲಿನ ವರಿಗೆ ತೋಟಗಾರಿಕೆ ತರಬೇತಿ ಕೇಂದ್ರಗಳಿಗೆ ನಿಗಧಿ ಪಡಿಸಿರುವ ಅಭ್ಯರ್ಥಿಗಳ ಗುರಿಯನ್ನು ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ನು ಪಾಲಿಸಿ, ಮೆರಿಟ್ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ಕೈಗೊಳ್ಳುವುದು.

6. **ಪ್ರಚಾರ: -**

ಹತ್ತು (10) ತಿಂಗಳ ತೋಟಗಾರಿಕೆ ತರಬೇತಿ ನಡೆಸುವ ಬಗ್ಗೆ ದೂರದರ್ಶನ, ಆಕಾಶವಾಣಿ, ಜಿಲ್ಲೆಯ ಪ್ರಮುಖ ದಿನಪತ್ರಿಕೆಗಳು ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ನೀಡಲು ಸೂಕ್ತ ಕ್ರಮ ಕೈಗೊಳ್ಳುವುದು. ವಿವಿಧ ಕಛೇರಿಗಳ ನೋಟೀಸ್ ಬೋರ್ಡ್ ನಲ್ಲಿ ಸಹ ಪ್ರಚಾರಗೊಳಿಸಲು ಸಂಬಂಧಿಸಿದ ಜಿಲ್ಲೆಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಮತ್ತು ತರಬೇತಿ ಕೇಂದ್ರಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರುಗಳು ಕ್ರಮ ತೆಗೆದುಕೊಳ್ಳತಕ್ಕದ್ದು. ಈ ಬಗ್ಗೆ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)ರವರು ಉಸ್ತುವಾರಿ ವಹಿಸುವುದು.

7. **ಅರ್ಜಿ: -**

ಹತ್ತು (10) ತಿಂಗಳ ತೋಟಗಾರಿಕೆ ತರಬೇತಿಯ ಅರ್ಜಿಗಳನ್ನು ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರ ಕಛೇರಿಯಲ್ಲಿ ಅಥವಾ ಇಲಾಖೆಯ ವೆಬ್‌ಸೈಟ್ **https://horticulturedir.karnataka.gov.in** ಮೂಲಕ ಪಡೆದು, ಭರ್ತಿ ಮಾಡಿರುವ ಅರ್ಜಿಯನ್ನು ಆಯಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರ ಕಛೇರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸಬೇಕು.

8. **ಅರ್ಜಿ ಶುಲ್ಕ: -**

ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು **ಕ್ರಮ ಸಂಖ್ಯೆ "ಸಿ"** ನಲ್ಲಿ ತಿಳಿಸಿರುವಂತೆ ಅರ್ಜಿ **ಶುಲ್ಕವನ್ನು ಸರ್ಕಾರಕ್ಕೆ (ಲೆಕ್ಕ ಶೀರ್ಷಿಕೆ: 0401-00-800-2-01, ಸಸ್ಯ ಸಂಗೋಪನೆ, ಇತರೆ ಜಮೆಗಳು) ಜಮಾ ಮಾಡಲು ಕ್ರಮ ತೆಗೆದುಕೊಳ್ಳುವುದು.**

9. **ಕರಾರು ಪತ್ರ: -**

ಅಭ್ಯರ್ಥಿಯು ತರಬೇತಿ ಮಧ್ಯದಲ್ಲಿ ಬಿಟ್ಟು ಹೋದಲ್ಲಿ ಅದುವರೆಗೂ ಅಭ್ಯರ್ಥಿಯು ಪಡೆದ ಶಿಷ್ಯ ವೇತನವನ್ನು ಸರ್ಕಾರಕ್ಕೆ ಜಮೆ ಮಾಡಬೇಕಾಗಿರುತ್ತದೆ. ಅಂತೆಯೇ ಈ ಷರತ್ತಿಗೆ ಒಪ್ಪಿಕೊಂಡು, ರೂ. 100/- ರ ಛಾಪಾ ಕಾಗದ (ಸ್ಟ್ಯಾಂಪ್ ಪೇಪರ್) ನಲ್ಲಿ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿ ಹಾಗೂ ಅವರ ತಂದೆ ಅಥವಾ ಪೋಷಕರಿಂದ ಅಫಿಡೆವಿಟ್ ಅನ್ನು

ಪಡೆದಿರಬೇಕು. ಸದರಿ ಅಫಿಡವಿಟ್‌ನಲ್ಲಿ ಸೇರಿಸಬೇಕಾದ ಇನ್ನಿತರೆ ತರಬೇತಿಯ ನಿಯಮಗಳನ್ನೊಳಗೊಂಡಂತೆ ಅಫಿಡವಿಟ್ ಮಾದರಿಯನ್ನು (ಅನುಬಂಧ-2) ಲಗತ್ತಿಸಿದೆ.

10. **ಮೂಲ ಪ್ರಮಾಣ ಪತ್ರಗಳನ್ನು ಭದ್ರಪಡಿಸುವುದು:-**

ಮೇಲಿನ ನಿಬಂಧನೆಗಳಿಗನುಸಾರವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ತರಬೇತಿಗೆ ಸೇರಿಸಿಕೊಳ್ಳುವಾಗ ಅವರಿಂದ ವಿದ್ಯಾರ್ಹತೆ, ಹುಟ್ಟಿದ ತಾರೀಖಿನ ಪ್ರಮಾಣ ಪತ್ರ, ಪಹಣಿ, ಜಾತಿ ಪ್ರಮಾಣ ಪತ್ರ ಮತ್ತು ಅಂಗವಿಕಲತೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಈ ಎಲ್ಲಾ ಮೂಲ ಪ್ರತಿಗಳನ್ನು ತರಬೇತಿ ಕೇಂದ್ರದ ಕಛೇರಿಯಲ್ಲಿ ಭದ್ರಪಡಿಸಿಟ್ಟು, ಅಭ್ಯರ್ಥಿಯು ಸರ್ಕಾರಕ್ಕೆ ಬೇಬಾಕಿಯಾಗಿ ತರಬೇತಿ ಕೇಂದ್ರ ಬಿಟ್ಟು ಹೋಗುವಾಗ ಮಾತ್ರ ಹಿಂದಿರುಗಿಸುವುದು.

11. **ತರಬೇತಿಯ ಸ್ಥಳ: -**

ತರಬೇತಿಗೆ ಸೇರುವ ಪ್ರತಿ ಅಭ್ಯರ್ಥಿಯೂ ತರಬೇತಿ ಕೇಂದ್ರದ ವಸತಿ ಗೃಹದಲ್ಲಿ ತಂಗುವುದು ಕಡ್ಡಾಯವಾಗಿರುತ್ತದೆ. ಮಹಿಳಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ/ಸುರಕ್ಷಿತ ವ್ಯವಸ್ಥೆ ಕಲ್ಪಿಸುವುದು ಆಯಾ ತರಬೇತಿ ಕೇಂದ್ರದ ಮುಖ್ಯಸ್ಥರು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರ ಜವಾಬ್ದಾರಿಯಾಗಿರುತ್ತದೆ.

12. **ಪರೀಕ್ಷೆಗೆ ಅರ್ಹತೆ: -**

ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಶೇಕಡ 75 ಕ್ಕಿಂತ ಕಡಿಮೆ ಹಾಜರಾತಿ ಇದ್ದಲ್ಲಿ ಪರೀಕ್ಷೆಗೆ ಹಾಜರಾಗಲು ಅರ್ಹತೆ ಇರುವುದಿಲ್ಲ (ವೈದ್ಯಕೀಯ ಆಧಾರದ ಮೇಲೆ ಗರಿಷ್ಠ 30 ದಿನಗಳು ವಿನಾಯಿತಿ ಪಡೆಯಬಹುದಾಗಿರುತ್ತದೆ).

13. **ತರಬೇತಿಯ ಪರೀಕ್ಷೆಗಳು ಮತ್ತು ಮೌಲ್ಯಮಾಪನ:**

ತರಬೇತಿಯ ಅಂತ್ಯದಲ್ಲಿ ಪ್ರಾಯೋಗಿಕ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳನ್ನು ನಡೆಸಲಾಗುವುದು. ಪ್ರಾಯೋಗಿಕ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಕನಿಷ್ಠ 35% ಅಂಕಗಳನ್ನು ಪಡೆಯಬೇಕಾಗಿರುತ್ತದೆ. 50% ಅಂಕಗಳನ್ನು ಪಡೆದವರಿಗೆ ದ್ವಿತೀಯ ದರ್ಜೆ ಹಾಗೂ 60% ಕ್ಕಿಂತ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳಿಗೆ ಪ್ರಥಮ ದರ್ಜೆಯನ್ನು ನೀಡಲಾಗುವುದು.

14. **ಭದ್ರತಾ ಠೇವಣಿ: -**

ತರಬೇತಿಗೆ ಸೇರುವ ಪ್ರತಿ **ಅಭ್ಯರ್ಥಿಯಿಂದಲೂ ರೂ.3,000/- (ರೂ. ಮೂರು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳ ಒಂದು ವರ್ಷದ ಅವಧಿಯ FDR (Fixed Deposit Receipt) ರೂಪದಲ್ಲಿ ಭದ್ರತಾ ಠೇವಣಿಯಾಗಿ** ಪಡೆದುಕೊಳ್ಳಬೇಕು. **FDR** ಗಳಿಗೆ ಸಂಬಂಧಿಸಿದ ತರಬೇತಿ ಕೇಂದ್ರಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕ **ರವರಿಗೆ Lien** ಆಗಿರುವಂತೆ ಪಡೆಯತಕ್ಕದ್ದು. ತರಬೇತಿ ಮುಗಿದ ನಂತರ ವಿದ್ಯಾರ್ಥಿಗಳಿಂದ ಯಾವುದೇ ಬೇಬಾಕಿ ಖಾತರಿಪಡಿಸಿಕೊಂಡು, ಸ್ವೀಕೃತಿ ಪಡೆದು ಭದ್ರತಾ ಠೇವಣಿಯನ್ನು

ಹಿಂದಿರುಗಿಸುವುದು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ ರವರುಗಳ ಜವಾಬ್ದಾರಿಯಾಗಿರುತ್ತದೆ.

15. **ಸಮ ವಸ್ತ್ರ: -**

ತರಬೇತಿಗೆ ಆಯ್ಕೆಯಾದ ವಿದ್ಯಾರ್ಥಿಗಳು ತರಬೇತಿಗೆ ಬರುವಾಗ ಹಸಿರು ಬಣ್ಣದ ಸಮವಸ್ತ್ರವನ್ನು ಧರಿಸಬೇಕು. ಮಹಿಳಾ ಅಭ್ಯರ್ಥಿಗಳು ಹಸಿರು ಬಣ್ಣದ ಚೂಡಿದಾರ್ ಅನ್ನು ಧರಿಸಬೇಕು. ಅಭ್ಯರ್ಥಿಗಳು ಸಮವಸ್ತ್ರವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಭರಿಸುವುದು.

**ವಿಶೇಷ ಸೂಚನೆ: -**

1. ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಮಿತಿಯು ಸರ್ಕಾರದ ಮೀಸಲಾತಿ ನಿಯಮವನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಮೀಸಲಾತಿ ಮುಗಿದ ನಂತರ ಉಳಿಕೆ ಮೀಸಲಾತಿಗಳನ್ನು ಇತರೆ ಅಭ್ಯರ್ಥಿಗಳಿಗೆ ನೀಡತಕ್ಕದ್ದು. ಒಂದು ವೇಳೆ ಮೀಸಲಾದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳನ್ನು ಪರಿಗಣಿಸುವುದು. ಮಹಿಳಾ ಮೀಸಲಾತಿ (33%) ಯನ್ನು ನಿಯಮಾನುಸಾರ ಪಾಲಿಸತಕ್ಕದ್ದು. ಮಹಿಳಾ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ಸ್ಥಾನಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು. ಮೀಸಲಾತಿ ಕುರಿತು ಸರ್ಕಾರದ ಮೀಸಲಾತಿಗಳನ್ವಯ ಆಯ್ಕೆ ಸಮಿತಿ ನಿರ್ಧರಿಸತಕ್ಕದ್ದು.
2. ಮಾಜಿ ಸೈನಿಕ ಅಭ್ಯರ್ಥಿಗಳು ಆಯ್ಕೆಗೊಂಡಲ್ಲಿ ಈಗಾಗಲೇ ಇಲಾಖೆಯಲ್ಲಿ ರೈತ ಮಕ್ಕಳಿಗೆ ಕಾಯ್ದಿರಿಸಿರುವ ಗುರಿಗಳಿಗೆ ಹೆಚ್ಚುವರಿಯಾಗಿ ಸೇರ್ಪಡಿಸಲಾಗುವುದು. ಸದರಿ ಅಭ್ಯರ್ಥಿಗಳಿಗೆ ಉಚಿತವಾಗಿ ಕಲಿಕೆಯ ಎಲ್ಲಾ ತರಹದ ಅವಕಾಶಗಳನ್ನು ಕಲ್ಪಿಸಲಾಗುವುದು. ಆದರೆ, ವಸತಿ ನಿಲಯದಲ್ಲಿ ವಾಸ್ತವ್ಯದ ವ್ಯವಸ್ಥೆಯು ಕಡ್ಡಾಯ ಇರುವುದಿಲ್ಲ ಹಾಗೂ ಶಿಷ್ಯವೇತನ (Stipend) ಕ್ಕೆ ಅವಕಾಶವಿರುವುದಿಲ್ಲ.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ಆಯ್ಕೆಯು ತೋಟಗಾರಿಕೆ ಪ್ರಯೋಗಿಕ ತರಬೇತಿಯಲ್ಲಿ ಹಮ್ಮಿಕೊಳ್ಳುವ ಚಟುವಟಿಕೆಗಳನ್ನು ಸ್ವಾವಲಂಬಿಯಾಗಿ ನಿರ್ವಹಿಸಲು ಶಕ್ತನಾಗಿರಬೇಕು ಹಾಗೂ ಚಟುವಟಿಕೆ ನಿರ್ವಹಿಸಲು ಸಾಧ್ಯವಾಗದಂತಹ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

2025-2026 ನೇ ಸಾಲಿನಲ್ಲಿ ತರಬೇತಿ ವಿದ್ಯಾರ್ಥಿಗಳ ಶಿಷ್ಯವೇತನ, ಶೈಕ್ಷಣಿಕ ಪ್ರವಾಸ, ಮಿನಿಕಿಟ್, ಪೂರಕ ತರಬೇತಿ ವೆಚ್ಚ, ಇತ್ಯಾದಿಗಳನ್ನು **ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತೋಟಗಾರಿಕೆ ವಿಸ್ತರಣೆ ಮತ್ತು ತರಬೇತಿ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ: 2401-00-111-0-08** (059) ರಲ್ಲಿ ಭರಿಸುವುದು.

**ನಿರ್ದೇಶಕರು**

**ರವರಿಗೆ,**

1. ವಿಭಾಗೀಯ ಜಂಟಿ ನಿರ್ದೇಶಕರು, ಬೆಂಗಳೂರು, ಕಲಬುರಗಿ, ಮೈಸೂರು ಮತ್ತು ಬೆಳಗಾವಿ ರವರ ಮಾಹಿತಿಗಾಗಿ.
2. ತೋಟಗಾರಿಕೆ ಉಪ ನಿರ್ದೇಶಕರು, (ಜಿಪಂ), ________________ ಜಿಲ್ಲೆ ರವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕೆ.
3. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾವ), ________________ ಜಿಲ್ಲೆ ರವರ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕೆ.
4. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು, ________________ ತೋಟಗಾರಿಕೆ ತರಬೇತಿ ಕೇಂದ್ರ, ________________ ತಾಲ್ಲೂಕು ________________ಜಿಲ್ಲೆ ರವರ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕೆ

**ಕರ್ನಾಟಕ ಸರ್ಕಾರ**

**ತೋಟಗಾರಿಕೆ ಇಲಾಖೆ**

**2025-2026 ನೇ ಸಾಲಿನ ತೋಟಗಾರಿಕೆ ತರಬೇತಿಗೆ ಅರ್ಜಿ**

| |
|---|
| 2 Colour Passport Size Photo |

| | | |
|---|---|---|
| 1. | ಅಭ್ಯರ್ಥಿಯ ಹೆಸರು | |
| 2. | ತಂದೆಯ ಹೆಸರು<br>(ತಂದೆ ಇಲ್ಲದಿದ್ದಲ್ಲಿ ತಾಯಿ ಅಥವಾ ಪೋಷಕರ ಹೆಸರು) | |
| 3. | ವರ್ಗ: - ಪ.ಜಾತಿ:<br>ಪ.ಪಂಗಡ:<br>ಅಂಗವಿಕಲ:<br>ಸಾಮಾನ್ಯ/ಇತರೆ:<br>(ಅಭ್ಯರ್ಥಿಯು ಪರಿಶಿಷ್ಟಜಾತಿ/ ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ್ದರೆ ಆಯಾ ವರ್ಗದ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ಸರ್ಟಿಫಿಕೇಟ್ ಲಗತ್ತಿಸಬೇಕು) (ಅಂಗವಿಕಲ ಅಭ್ಯರ್ಥಿಗಳು UDID card/ವೈದ್ಯಕೀಯ ಪ್ರಾಧಿಕಾರ ಇವರಿಂದ ಪ್ರಮಾಣ ಪತ್ರವನ್ನು ಲಗತ್ತಿಸಬೇಕು) | |
| 4. | ಲಿಂಗ :- ಹೆಣ್ಣು/ಗಂಡು | |
| 5. | ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ,<br>ಮೊಬೈಲ್ ಸಂ: | |
| 6. | ಆಧಾರ್ ಕಾರ್ಡ್ (ಪ್ರತಿಯನ್ನು ಲಗತ್ತಿಸುವುದು) | ಸಂಖ್ಯೆ: |
| 7. | ಹುಟ್ಟಿದ ದಿನಾಂಕ ಮತ್ತು ವಯಸ್ಸು | |
| 8. | ಎಸ್.ಎಸ್.ಎಲ್.ಸಿ.ಯಲ್ಲಿ ಪರೀಕ್ಷೆಯಲ್ಲಿ ಪಡೆದ ಅಂಕಗಳು:<br>{ಅಭ್ಯರ್ಥಿಯು ತೇರ್ಗಡೆಯಾಗಿರುವ ಅಂಕಪಟ್ಟಿ ಲಗತ್ತಿಸಬೇಕು. (ಒಂದಕ್ಕಿಂತ ಹೆಚ್ಚಿನ ಪ್ರಯತ್ನಗಳಲ್ಲಿ ತೇರ್ಗಡೆಯಾಗಿರುವವರು ಕೃಢೀಕೃತ ಅಂಕಪಟ್ಟಿ ಲಗತ್ತಿಸಬೇಕು. ಪ್ರಯತ್ನವಾರು ಪಡೆದಿರುವ ಅಂಕಪಟ್ಟಿ ಒಪ್ಪಲಾಗದು)} | ಒಟ್ಟು ಅಂಕ:<br>ಪಡೆದ ಅಂಕ:<br>ಶೇಕಡಾವಾರು: |
| 9. | ಅಭ್ಯರ್ಥಿಯ ತಂದೆ, ತಾಯಿ ಅಥವಾ ಪೋಷಕರ ಜಮೀನಿನ ವಿವರ, ಪಹಣಿ (RTC) ನೀಡುವುದು.<br>(ಇದರಲ್ಲಿ ತಂದೆ/ತಾಯಿ ಇಲ್ಲದಿದ್ದ ಪಕ್ಷದಲ್ಲಿ ಅಭ್ಯರ್ಥಿಗೂ ಜಮೀನು ಹೊಂದಿರುವವರಿಗೂ ಇರುವ ಸಂಬಂಧವನ್ನು ವಂಶವೃಕ್ಷ ದೃಢೀಕರಣ ಪತ್ರ ನೀಡುವುದು) | |

| ಕ್ರ.ಸಂ | | ಸರ್ವೆ ನಂಬರ್ | ವಿಸ್ತೀರ್ಣ |
|---|---|---|---|
| 1. | ತರಿ | | |

| | | | | | |
|---|---|---|---|---|---|
| | | 2. ಖುಷ್ಕಿ | | | |
| | | 3. ಬಾಗಾಯ್ತು | | | |
| 10 | ಅಭ್ಯರ್ಥಿಯು ತರಬೇತಿಗೆ ಸೇರುವ ಉದ್ದೇಶ | | | | |
| 11 | ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD)/ K-2 payment challan ವಿವರಗಳು | IPO /DD ಸಂಖ್ಯೆ:<br>ದಿನಾಂಕ:<br>ಮೌಲ್ಯ: | | | |

**ಮಾನ್ಯರೆ,**

2025 ನೇ ಸಾಲಿನ ಮೇ ತಿಂಗಳಿನಲ್ಲಿ ಪ್ರಾರಂಭವಾಗುವ ತೋಟಗಾರಿಕೆ ತರಬೇತಿಗೆ ಪ್ರವೇಶ ಕೋರಿ ನನ್ನ ಮಗ/ಮಗಳಾದ ............................................. ರವರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ತರಬೇತಿ ಕಾಲದಲ್ಲಿ ತರಬೇತಿಯ ಹಾಗೂ ವಿದ್ಯಾರ್ಥಿನಿಲಯದ ಎಲ್ಲಾ ನಿಯಮಗಳನ್ನು ನನ್ನ ಮಗ/ಮಗಳು ಪರಿಪಾಲಿಸುತ್ತಾರೆಂದೂ, ಒಂದು ವೇಳೆ ಅವರಿಂದ ನಿಯಮಗಳ ಉಲ್ಲಂಘನೆಯಾದಲ್ಲಿ ಅದಕ್ಕೆ ತಗಲುವ ನಷ್ಟಗಳಿಗೆ ನಾನು ಹೊಣೆಯಾಗುತ್ತೇನೆಂದು ಈ ಮೂಲಕ ಒಪ್ಪಿರುತ್ತೇನೆ.

**ಅಭ್ಯರ್ಥಿಯ ತಂದೆ/ತಾಯಿ ಅಥವಾ**
**ಪೋಷಕರ ಸಹಿ (ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ)**

**ಅಭ್ಯರ್ಥಿಯ ಸಹಿ**

**ಸಾಕ್ಷಿಗಳ ಸಹಿ ಮತ್ತು ಪೂರ್ಣ ಅಂಚೆ ವಿಳಾಸ**

1.

2.

## ತರಬೇತಿ ಕಾರ್ಯಕ್ರಮದ ಷರತ್ತು/ನಿಬಂಧನೆಗಳು

1. ಅರ್ಜಿಗಳನ್ನು ಇಲಾಖೆಯ ವೆಬ್‌ಸೈಟ್ **https://horticulturedir.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದೃಢೀಕರಣ, ಸರ್ಟಿಫಿಕೇಟ್ ಮತ್ತು **2 ಕಲರ್ ಪಾಸ್‌ಪೋರ್ಟ್ ಸೈಜ್ (2 Colour Passport size Photo) ಫೋಟೊಗಳ** ಸಹಿತವಾಗಿ ದಿನಾಂಕ: 01-04-2025 (ಸಂಜೆ 5.30 ಘಂಟೆ ಯೊಳಗೆ) ರೊಳಗೆ ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಇವರ ಕಛೇರಿಗೆ ಸಲ್ಲಿಸಬೇಕು.
2. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವಾಗ ಅರ್ಜಿ ಶುಲ್ಕದ ಬಾಬ್ತನ್ನು ಆಯಾಯ ಜಿಲ್ಲೆಗಳ **ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)** ರವರ ಹೆಸರಿನಲ್ಲಿ ಪಡೆದು, ಅರ್ಜಿಯ ಜೊತೆಗೆ ಲಗತ್ತಿಸಬೇಕು.
3. **ವಿದ್ಯಾರ್ಹತೆ:** ಕನ್ನಡ ವಿಷಯಗಳೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.
4. ಈ ತರಬೇತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಕನ್ನಡದಲ್ಲಿ ಮಾತ್ರ ಹೇಳಲಾಗುವುದು. ಆದ್ದರಿಂದ ಅಭ್ಯರ್ಥಿಯು ಕನ್ನಡ ಓದುವುದು, ಬರೆಯುವುದು ಹಾಗೂ ಮಾತನಾಡುವುದನ್ನು ತಿಳಿದಿರಬೇಕು.
5. **ವಯೋಮಿತಿ:** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಅಂಗವಿಕಲರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 33 ವರ್ಷ, ಮಾಜಿ ಸೈನಿಕರಿಗೆ 33 ರಿಂದ ಗರಿಷ್ಟ 65 ವರ್ಷ ಹಾಗೂ ಇತರರಿಗೆ ಕನಿಷ್ಟ 18 ವರ್ಷ ರಿಂದ ಗರಿಷ್ಟ 30 ವರ್ಷ.
6. ಈ ತರಬೇತಿಯು ರೈತರ ಮಕ್ಕಳಿಗಾಗಿ ಇರುವುದರಿಂದ ಅಭ್ಯರ್ಥಿಯ ತಂದೆ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ (ಅನುಬಂಧ-3). ಅಭ್ಯರ್ಥಿಗಳು ಪ್ರಯೋಗಿಕ ತರಗತಿಗಳಲ್ಲಿ ತೋಟದ ಕೆಲಸಗಳನ್ನು ಮಾಡುವಷ್ಟು ದೃಢಕಾಯರಾಗಿರಬೇಕು. ಮಾಜಿ ಸೈನಿಕರು ಸಾಗುವಳಿ ಜಮೀನು ಹೊಂದಿರುವ ಬಗ್ಗೆ ಪಹಣಿಯನ್ನು ನೀಡುವುದು.
7. ತಮ್ಮ ಸ್ವಂತ ತೋಟಗಳನ್ನು ಅಭಿವೃದ್ಧಿಪಡಿಸಬೇಕೆಂಬ ಅಭಿಲಾಷೆಯುಳ್ಳ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು.
8. ಅರ್ಜಿಯಲ್ಲಿ ಕೇಳಿರುವ ಎಲ್ಲಾ ವಿಷಯಗಳಿಗೂ ಪೂರ್ಣವಾದ ಮತ್ತು ಸರಿಯಾದ ವಿವರಣೆಯನ್ನು ಕೊಡಬೇಕು. **3ನೇ, 8ನೇ ಮತ್ತು 9ನೇ ಕಾಲಂಗಳಿಗೆ ಅಗತ್ಯವಾಗಿ ಬೇಕಾದ ಸರ್ಟಿಫಿಕೇಟ್‌ಗಳನ್ನು ಲಗತ್ತಿಸಬೇಕು.** ಇಲ್ಲದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
9. ಈ ತರಬೇತಿಯ ಕಾಲಾವಧಿ 10 ತಿಂಗಳು. ತರಬೇತಿಯು ದಿನಾಂಕ: 02-05-2025 ರಿಂದ ಪ್ರಾರಂಭವಾಗಿ 28-02-2026ಕ್ಕೆ ಅಂತ್ಯಗೊಳ್ಳುವುದು.
10. **ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ.1,750/-ಗಳ ಮಾಸಿಕ ಶಿಷ್ಯವೇತನ (Stipend) (ಮಾಜಿ ಸೈನಿಕರನ್ನು ಹೊರತುಪಡಿಸಿ) ವನ್ನು ನೀಡಲಾಗುವುದು.**
11. **ಶಿಷ್ಯವೇತನ/Stipend ವನ್ನು ಅಭ್ಯರ್ಥಿಗಳ ಖಾತೆಗೆ ನೇರವಾಗಿ ಜಮೆ ಮಾಡುವುದು. ಸದರಿ ಶಿಶ್ಯ ವೇತನದಲ್ಲಿ ಪ್ರತಿ ತಿಂಗಳು ಆಯ್ಕೆಯಾಗುವ ಇಬ್ಬರು ವಿಚಕ್ಷಕರು (Prefects) ಊಟದ ವ್ಯವಸ್ಥೆಗಳಾದ ವಿವಿಧ ರೀತಿಯ ಬೋಜನ ಮತ್ತು ಗುಣಮಟ್ಟದ ಆಹಾರವನ್ನು ನೀಡುವ ನಿರ್ವಹಣೆಯನ್ನು ಮತ್ತು ಶಿಶ್ಯ ವೇತನದಲ್ಲಿಯೇ ವೆಚ್ಚ ಭರಿಸುವ ಜವಾಬ್ದಾರಿಯನ್ನು ಅಭ್ಯರ್ಥಿಗಳೇ ವಹಿಸತಕ್ಕದ್ದು.** ಸದರಿ ವ್ಯವಸ್ಥೆಯನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ)/ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರು ಮೇಲ್ವಿಚಾರಣೆ ಮಾಡುವುದು.

12. **ತರಬೇತಿಯ ಪರೀಕ್ಷೆಗಳು ಮತ್ತು ಮೌಲ್ಯಮಾಪನ:** ತರಬೇತಿಯ ಅಂತ್ಯದಲ್ಲಿ ಪ್ರಾಯೋಗಿಕ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳನ್ನು ನಡೆಸಲಾಗುವುದು. ಪ್ರಾಯೋಗಿಕ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಕನಿಷ್ಠ 35% ಅಂಕಗಳನ್ನು ಪಡೆಯಬೇಕಾಗಿರುತ್ತದೆ. 50% ಅಂಕಗಳನ್ನು ಪಡೆದವರಿಗೆ ದ್ವಿತೀಯ ದರ್ಜೆ ಹಾಗೂ 60% ಕ್ಕಿಂತ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳಿಗೆ ಪ್ರಥಮ ದರ್ಜೆಯನ್ನು ನೀಡಲಾಗುವುದು.

13. ಪ್ರತಿ ವಿದ್ಯಾರ್ಥಿಯೂ ತಮ್ಮ ಸ್ವಂತ ಖರ್ಚಿನಲ್ಲಿ ಹಸಿರು ಬಣ್ಣದ ಸಮವಸ್ತ್ರಗಳನ್ನು ಹೊಲಿಸಿಕೊಂಡು ತರಬೇತಿ ಸಮಯದಲ್ಲಿ ಕಡ್ಡಾಯವಾಗಿ ಧರಿಸಿಕೊಳ್ಳಬೇಕು.

14. ಅಂತಿಮ ಪರೀಕ್ಷೆಗೆ ಕುಳಿತುಕೊಳ್ಳಲು ಕನಿಷ್ಟ ಶೇಕಡ 75 ರಷ್ಟು ಹಾಜರಾತಿ ಇರಲೇಬೇಕು. **(ವೈದ್ಯಕೀಯ ಆಧಾರದ ಮೇಲೆ ಗರಿಷ್ಠ 30 ದಿನಗಳು ವಿನಾಯಿತಿ ಪಡೆಯಬಹುದು).**

15. ತರಬೇತಿ ಸಮಯದಲ್ಲಿ ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿನಿಯಲ್ಲಿ ಅಶಿಸ್ತು, ದುರ್ನಡತೆಗಳು, ದುಶ್ಚಟಗಳು (ಮದ್ಯಪಾನ, ಧೂಮಪಾನ, ಇತ್ಯಾದಿ) ಕಂಡುಬಂದಲ್ಲಿ ಯಾವುದೇ ರೀತಿಯ ಸಮಜಾಯಿಷಿಯನ್ನು ನೀಡದೇ ತರಬೇತಿಯಿಂದ ವಜಾ ಮಾಡಲಾಗುವುದು.

16. ಅಭ್ಯರ್ಥಿಯು ತರಬೇತಿಯ ಮಧ್ಯದಲ್ಲಿ ಬಿಟ್ಟು ಹೋದರೆ ಅದುವರೆಗೂ ಪಡೆದಿರುವ ಶಿಷ್ಯ ವೇತನವನ್ನು ಹಿಂದಿರುಗಿಸಬೇಕಾಗುತ್ತದೆ.

17. ತರಬೇತಿಯ ತರಗತಿ ಅವಧಿಯಲ್ಲಿ ಅಭ್ಯರ್ಥಿಗಳು ಮೊಬೈಲ್ ಫೋನನ್ನು ಬಳಸುವಂತಿಲ್ಲ.

18. ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ನು ಪಾಲಿಸಿ, ಮೆರಿಟ್ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ಕೈಗೊಳ್ಳುವುದು.

## ತೋಟಗಾರಿಕೆ ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿ ನಿಲಯದ ನಿಯಮಗಳು

1. ತೋಟಗಾರಿಕೆ ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿ ನಿಲಯವನ್ನು ತೋಟಗಾರಿಕೆ ತರಬೇತಿ ವಿದ್ಯಾರ್ಥಿಗಳ ಊಟ ಮತ್ತು ವಸತಿ ಸೌಕರ್ಯಗಳಿಗಾಗಿಯೇ ತೆರೆಯಲಾಗಿದೆ.
2. ಈ ವಿದ್ಯಾರ್ಥಿನಿಲಯದ ಪೂರ್ಣ ನಿರ್ವಹಣೆಯು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ ಇವರಿಗೆ ಸೇರಿದ್ದು, ವಸತಿ ಗೃಹದಲ್ಲಿ ಸ್ಥಳಗಳನ್ನು ಹಂಚುವ ಹಕ್ಕನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸಹಾಯಕ ತೋಟಗಾರಿಕೆ ನಿರ್ದೇಶಕರು ಇವರಿಗೆ ಕಾಯ್ದಿರಿಸಲಾಗಿದೆ ಮತ್ತು ಯಾವ ವಿದ್ಯಾರ್ಥಿ/ವಿದ್ಯಾರ್ಥಿನಿಯು ಅವರ ಅನುಮತಿಯಿಲ್ಲದೇ ಹಂಚಿಕೆ ಮಾಡಿದ ಸ್ಥಳವನ್ನಾಗಲೀ, ವಸತಿಯನ್ನಾಗಲೀ ಬದಲಾಯಿಸಲು ಅವಕಾಶವಿರುವುದಿಲ್ಲ.
3. ಊಟಕ್ಕೆ ನಿಗದಿತವಾದ ವೇಳೆಯನ್ನು ಎಲ್ಲಾ ವಿದ್ಯಾರ್ಥಿಗಳೂ ಕಟ್ಟುನಿಟ್ಟಾಗಿ ಅನುಸರಿಸಬೇಕು.
4. ಪ್ರತಿ ಅಭ್ಯರ್ಥಿಯು 3,000/-ಗಳನ್ನು ಮುಂಗಡವಾಗಿ FDR (Fixed Deposit Receipt) ರೂಪದಲ್ಲಿ ಭದ್ರತಾ ಠೇವಣಿಯಾಗಿ ಕಟ್ಟಬೇಕು. ತರಬೇತಿ ಮುಗಿದ ನಂತರ ಇದನ್ನು ಹಿಂದಿರುಗಿಸಲಾಗುವುದು.
5. ಪ್ರತಿ ಅಭ್ಯರ್ಥಿಯು ತಮ್ಮ ವಸತಿ ಗೃಹವನ್ನು ಸದಾ ನಿರ್ಮಲವಾಗಿಯೂ, ಚೊಕ್ಕಟವಾಗಿಯೂ ಇಟ್ಟುಕೊಳ್ಳಬೇಕು.
6. ಯಾವ ವಿದ್ಯಾರ್ಥಿ/ವಿದ್ಯಾರ್ಥಿನಿಯು ತರಬೇತಿ ಅವಧಿಯಲ್ಲಿ ವಿದ್ಯಾರ್ಥಿ ನಿಲಯದಿಂದ ಹೊರಗೆ ವಾಸಿಸಲು ಅವಕಾಶವಿರುವುದಿಲ್ಲ(ಮಾಜಿ ಸೈನಿಕರನ್ನು ಹೊರತುಪಡಿಸಿ).
7. ವಿದ್ಯಾರ್ಥಿಗಳು ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರಲ್ಲಿಯೂ ವಿನಯವಾಗಿ ನಡೆದುಕೊಳ್ಳಬೇಕು.
8. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ದಿನಚರಿ ಪುಸ್ತಕವನ್ನು ಇಟ್ಟುಕೊಳ್ಳಬೇಕು. ದಿನಚರಿ ಪುಸ್ತಕವನ್ನು ಪ್ರತಿನಿತ್ಯ ಬರೆದು ಪ್ರತಿ ತಿಂಗಳೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು (ತರಬೇತಿ ಕೇಂದ್ರ) ರವರ ಸಹಿ ಪಡೆಯಬೇಕು.
9. ವಸತಿ ಸೌಕರ್ಯವನ್ನು ಹೊರತುಪಡಿಸಿ, ಪ್ರತಿ ತಿಂಗಳೂ ಊಟಕ್ಕೆ ತಗಲುವ ವೆಚ್ಚವನ್ನು ಪ್ರತಿ ಮಾಹೆಯ ಶಿಷ್ಯ ವೇತನದಲ್ಲಿ ಭರಿಸಲಾಗುವುದು.
10. ಯಾವ ವಿದ್ಯಾರ್ಥಿಯೂ ರಾತ್ರಿ 7.00 ಗಂಟೆಯ ನಂತರ ವಿದ್ಯಾರ್ಥಿ ನಿಲಯದಿಂದ ಹೊರಗಡೆ ಇರಲು ಅವಕಾಶವಿರುವುದಿಲ್ಲ.
11. ಯಾವುದೇ ವಿದ್ಯಾರ್ಥಿಯು ದುರ್ನಡತೆಯಿಂದ, ದುರಾಭಿಪ್ರಾಯದಿಂದಾಗಲೀ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
12. ಸರ್ಕಾರಿ ಆಸ್ತಿಪಾಸ್ತಿಗಳಿಗೆ ವಿದ್ಯಾರ್ಥಿಗಳಿಂದ ನಷ್ಟ ಉಂಟಾದ ಪಕ್ಷದಲ್ಲಿ ಅಂತಹ ನಷ್ಟಗಳಿಗೆ ಕಾರಣರಾದ ವಿದ್ಯಾರ್ಥಿಗಳಿಂದ ನಷ್ಟದ ಹಣವನ್ನು ವಸೂಲಿ ಮಾಡಲಾಗುವುದು.

**ಓದಿ ತಿಳಿದಿದ್ದೇನೆ**

**ಅಭ್ಯರ್ಥಿಯ ತಂದೆ/ತಾಯಿ ಅಥವಾ**
**ಪೋಷಕರ ಸಹಿ (ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ).**

**ಅಭ್ಯರ್ಥಿಯ ಸಹಿ**

## ಅನುಬಂಧ-2

## ಸ್ವಯಂ ಘೋಷಣೆ

ಶ್ರೀ/ಕುಮಾರಿ/ಶ್ರೀಮತಿ........................................... ಬಿನ್/ಕೋಂ........................................ ವಯಸ್ಸು:............... ವರ್ಷ.................. ಗ್ರಾಮ|| ............................ ತಾ|| ............................................ ಜಿಲ್ಲೆ: ............................................ ಆದ ನಾನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ, ................................ ರವರ ಮುಂದೆ ಸತ್ಯ ಪ್ರತಿಜ್ಞೆಯ ಮೇರೆಗೆ ಘೋಷಣೆ ಮಾಡುವುದೇನೆಂದರೆ.

1. ನಾನು .................................. ಗ್ರಾಮದ ನಿವಾಸಿಯಾಗಿದ್ದೇನೆ.
2. ನಾನು ............................. ನೇ ಸಾಲಿನಲ್ಲಿ ಕನ್ನಡ ವಿಷಯಗಳೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತೇನೆ.
3. ಶ್ರೀ/ಶ್ರೀಮತಿ________________ ಬಿನ್/ಕೋಂ______________ ರವರು__________ ತಾಲ್ಲೂಕು__________ ಹೋಬಳಿಯ __________ ಗ್ರಾಮದ ಸರ್ವೆ ನಂ. ______ ರಲ್ಲಿ ಜಮೀನನ್ನು ಹೊಂದಿರುತ್ತಾರೆ.
4. ತರಬೇತಿ ಸಮಯದಲ್ಲಿ ಯಾವುದೇ ರೀತಿಯ ಅಶಿಸ್ತು, ದುರ್ನಡತೆಗಳು, ದುಶ್ಚಟಗಳು (ಮದ್ಯಪಾನ, ಧೂಮಪಾನ, ಇತ್ಯಾದಿ) ಕಂಡುಬಂದಲ್ಲಿ ಇಲಾಖಾ ಅಧಿಕಾರಿಗಳು ಕೈಗೊಳ್ಳುವ ಶಿಸ್ತು ಕ್ರಮಕ್ಕೆ ಬದ್ಧನಾಗಿರುತ್ತೇನೆ.
5. ತರಬೇತಿಯ ಮಧ್ಯದಲ್ಲಿ ಬಿಟ್ಟು ಹೋದರೆ ಅದುವರೆಗೂ ಪಡೆದಿರುವ ಶಿಷ್ಯ ವೇತನ(Stipend)ವನ್ನು ಸರ್ಕಾರದ ನಿಯಮಾನುಸಾರ ಹಿಂದಿರುಗಿಸಲು ಒಪ್ಪಿರುತ್ತೇನೆ.
6. ತರಬೇತಿ ಕೇಂದ್ರದಲ್ಲಿ ನಾನು ಇರುವ ವಸತಿ ಗೃಹವನ್ನು ಸದಾ ನಿರ್ಮಲವಾಗಿಯೂ, ಚೊಕ್ಕಟವಾಗಿಯೂ ಇಟ್ಟುಕೊಳ್ಳುತ್ತೇನೆ.
7. ತರಬೇತಿಯ ಅವಧಿಯಲ್ಲಿ ಸರ್ಕಾರಿ ಆಸ್ತಿ ಪಾಸ್ತಿಗಳಿಗೆ ನಷ್ಟ ಉಂಟಾದ ಪಕ್ಷದಲ್ಲಿ ಅಂತಹ ನಷ್ಟವನ್ನು ಭರಿಸಿಕೊಡಲು ಬದ್ಧನಾಗಿರುತ್ತೇನೆ.
8. ಅರ್ಜಿಯಲ್ಲಿ ನಮೂದಿಸಿದ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಒಂದು ವೇಳೆ ಅಸತ್ಯವೆಂದು ಕಂಡುಬಂದಲ್ಲಿ ನನ್ನ ವಿರುದ್ಧ ಸೂಕ್ತ ಕಾನೂನು ರೀತಿಯ ಕ್ರಮ ಜರುಗಿಸಬಹುದಾಗಿರುತ್ತದೆ. ತೋಟಗಾರಿಕೆ ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿ ನಿಲಯದ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿಕೊಂಡು ಬರೆದುಕೊಟ್ಟ ಪ್ರಮಾಣ ಪತ್ರ.

**ಸ್ಥಳ:**

**ದಿನಾಂಕ:**

**ಅಭ್ಯರ್ಥಿಯ ಸಹಿ**

**ಅಭ್ಯರ್ಥಿಯ ತಂದೆ/ತಾಯಿ ಅಥವಾ**

**ಪೋಷಕರ ಸಹಿ (ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ)**

**ಸಾಕ್ಷಿಗಳ ಸಹಿ ಮತ್ತು ವಿಳಾಸ**

1.

2.

3.

## ಅನುಬಂಧ-3

## ಹಿಡುವಳಿ ದೃಢೀಕರಣ ಪತ್ರ

2025-2026 ನೇ ಸಾಲಿನ ತೋಟಗಾರಿಕೆ ತರಬೇತಿಗೆ ಅರ್ಜಿ ಹಾಕಿಕೊಳ್ಳುತ್ತಿರುವ ಶ್ರೀ.................................... .................................... ............................................ ಇದೇ ಹೆಸರಿನಲ್ಲಿ/ ತಂದೆ ಹೆಸರಿನಲ್ಲಿ / ತಾಯಿ ಹೆಸರಿನಲ್ಲಿ ಅಥವಾ ಪೋಷಕರ ಹೆಸರಿನಲ್ಲಿ ಈ ಕೆಳಕಂಡಂತೆ ಜಮೀನುಗಳು ಇರುತ್ತವೆಂದು ದೃಢೀಕರಿಸಲಾಗಿದೆ.

| ಕ್ರ.ಸಂ | ವಿವರ | ಜಮೀನಿನ ವಿಳಾಸ | ವಿಸ್ತೀರ್ಣ |
|---|---|---|---|
| 1. | ತಂದೆಯ ಹೆಸರಿನಲ್ಲಿ | | |
| 2. | ತಾಯಿಯ ಹೆಸರಿನಲ್ಲಿ | | |
| 3. | ಪೋಷಕರ ಹೆಸರಿನಲ್ಲಿ | | |
| | **ಒಟ್ಟು ವಿಸ್ತೀರ್ಣ** | | |

**ಸೂಚನೆ:-**

ಪೋಷಕರ ಹೆಸರಿನಲ್ಲಿದ್ದರೆ ಯಾವ ರೀತಿಯಲ್ಲಿ ಪೋಷಕರೆಂಬುದನ್ನು ಗ್ರಾಮ ಲೆಕ್ಕಾಧಿಕಾರಿಗಳು ದೃಢೀಕರಿಸಬೇಕು.

**ಗ್ರಾಮ ಲೆಕ್ಕಾಧಿಕಾರಿಗಳ ಸಹಿ ಮತ್ತು**

**ಪದನಾಮ ಮೊಹರು**

**ದೃಢೀಕರಣ**

**ಕಂದಾಯ ನಿರೀಕ್ಷಕರ ಸಹಿ ಮತ್ತು**

**ಪದನಾಮ ಮೊಹರು**

**ದೃಢೀಕರಣ ಪತ್ರ**

2025-2026ನೇ ಸಾಲಿನ ತೋಟಗಾರಿಕೆ ತರಬೇತಿಗೆ ಅರ್ಜಿ ಸಲ್ಲಿಸುತ್ತಿರುವ ಶ್ರೀ/ಕು............................................ ಆದ ನನ್ನ ಮಗ/ಮಗಳು ಇವರಿಗೆ ಕೋವಿಡ್-19ರ ಸಾಂಕ್ರಾಮಿಕದ ಯಾವುದೇ ರೋಗಲಕ್ಷಣಗಳು ಮತ್ತು ಇತರೆ ಯಾವುದೇ ಗಂಭೀರ ಕಾಯಿಲೆ/ ರೋಗಗಳು ಇರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ ಹಾಗೂ ಸದರಿ 10 ತಿಂಗಳ ತರಬೇತಿಗೆ ಕಳುಹಿಸಲು ಒಪ್ಪಿಕೊಂಡಿರುತ್ತೇನೆ.

**ಸ್ಥಳ:**

**ದಿನಾಂಕ:**

**ಅಭ್ಯರ್ಥಿಯ ತಂದೆ/ತಾಯಿ ಅಥವಾ**

**ಪೋಷಕರ ಸಹಿ (ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ)**

## ಅನುಬಂಧ-1

### 2025-26 ನೇ ಸಾಲಿಗೆ 10 ತಿಂಗಳ ತೋಟಗಾರಿಕೆ ತರಬೇತಿ ಕೇಂದ್ರಕ್ಕೆ ನಿಗದಿಪಡಿಸಿರುವ ಅಭ್ಯರ್ಥಿಗಳ ಗುರಿ ವಿವರ

| ಕ್ರ. ಸಂ. | ವಿಭಾಗ | ತೋಟಗಾರಿಕೆ ತರಬೇತಿ ಕೇಂದ್ರದ ಹೆಸರು | ಜಿಲ್ಲೆ | ಗುರಿ |
|---|---|---|---|---|
| 1 | ಬೆಂಗಳೂರು | ಲಾಲ್ ಬಾಗ್, ಬೆಂಗಳೂರು | ಬೆಂಗಳೂರು (ಗ್ರಾ) | 7 |
| | | | ರಾಮನಗರ | 7 |
| | | | ಬೆಂಗಳೂರು ನಗರ | 4 |
| | | | ಕೋಲಾರ | 10 |
| | | | ಚಿಕ್ಕಬಳ್ಳಾಪುರ | 10 |
| | | | ತುಮಕೂರು | 12 |
| | | ಒಟ್ಟು | | **50** |
| 2 | ಬೆಂಗಳೂರು | ಐಯ್ಯನಹಳ್ಳಿ, ಚಿತ್ರದುರ್ಗ ಜಿಲ್ಲೆ | ಚಿತ್ರದುರ್ಗ | 15 |
| | | | ದಾವಣಗೆರೆ | 15 |
| | | ಒಟ್ಟು | | **30** |
| 3 | ಮೈಸೂರು | ಸೋಮನಹಳ್ಳಿ ಕಾವಲ್, ಹಾಸನ ಜಿಲ್ಲೆ | ಮಂಡ್ಯ | 13 |
| | | | ಕೊಡಗು | 7 |
| | | | ಹಾಸನ | 14 |
| | | ಒಟ್ಟು | | **34** |
| 4 | ಮೈಸೂರು | ಬೀಜುವಳ್ಳಿ ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ | ಚಿಕ್ಕಮಗಳೂರು | 10 |
| | | | ದಕ್ಷಿಣ ಕನ್ನಡ | 8 |
| | | | ಉಡುಪಿ | 7 |
| | | ಒಟ್ಟು | | **25** |
| 5 | ಬೆಳಗಾವಿ | ಹೊಸೂರು ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ | ಉತ್ತರ ಕನ್ನಡ | 17 |
| | | | ಶಿವಮೊಗ್ಗ | 18 |
| | | ಒಟ್ಟು | | **35** |
| 6 | ಕಲಬುರಗಿ | ಮಾಲವಿ, ವಿಜಯನಗರ ಜಿಲ್ಲೆ | ಬಳ್ಳಾರಿ | 24 |
| | | | ವಿಜಯನಗರ | 24 |
| | | ಒಟ್ಟು | | **48** |
| 7 | ಕಲಬುರಗಿ | ಚಂದ್ರಂಪಳ್ಳಿ, ಕಲಬುರಗಿ ಜಿಲ್ಲೆ | ಬೀದರ್ | 16 |
| | | | ಕಲಬುರ್ಗಿ | 15 |
| | | | ಯಾದಗಿರಿ | 17 |
| | | ಒಟ್ಟು | | **48** |
| 8 | ಬೆಳಗಾವಿ | ಹಿಡಕಲ್ ಡ್ಯಾಂ, ಬೆಳಗಾಂ ಜಿಲ್ಲೆ | ಬೆಳಗಾವಿ | 16 |
| | | | ವಿಜಯಪುರ | 17 |
| | | | ಬಾಗಲಕೋಟೆ | 15 |
| | | ಒಟ್ಟು | | **48** |
| 9 | ಬೆಳಗಾವಿ | ಗದಗ, ಗದಗ ಜಿಲ್ಲೆ | ಗದಗ | 17 |
| | | | ಹಾವೇರಿ | 16 |
| | | | ಧಾರವಾಡ | 15 |
| | | ಒಟ್ಟು | | **48** |
| 10 | ಮೈಸೂರು | ರಂಗಸಮುದ್ರ, ಮೈಸೂರು ಜಿಲ್ಲೆ | ಮೈಸೂರು | 13 |
| | | | ಚಾಮರಾಜನಗರ | 13 |
| | | ಒಟ್ಟು | | **26** |
| 11 | ಕಲಬುರಗಿ | ಮುನಿರಾಬಾದ್, ಕೊಪ್ಪಳ ಜಿಲ್ಲೆ | ಕೊಪ್ಪಳ | 20 |
| | | | ರಾಯಚೂರು | 20 |
| | | ಒಟ್ಟು | | **40** |
| | | **Total as per Target** | | **432** |

ನಿರ್ದೇಶಕರು

D:\bakup\AHO-1\2025-26\Training center notification\Training center notification.docx